ಅಮಲ್ ಜಾರಿ ಸಂಃ 12/2022 ಪಿ.ಡಬ್ಲ್ಯು: 01

ದಿನಾಂಕಃ 04-04-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ.ಹೆಚ್.ಎಲ್.ವಿ ಜೆ.ಡಿ.ಆರ್ ಗಳ ಪರ ವಕೀಲರಿಂದಃ

ಸರ್ವೆ ನಂ. 88 ರಲ್ಲಿ ನನಗೆ ಖರಾಬನ್ನು ಹೊರತುಪಡಿಸಿ 7 ಎಕರೆ 15 ಗುಂಟೆ ಮಂಜೂರಾಗಿದೆ ಎಂದರೆ ಸರಿ. ಮೂಲ ಸರ್ವೆ ನಂ. 88 ರ ಒಟ್ಟು ವಿಸ್ತೀರ್ಣ 8 ಎಕರೆ 28 ಗುಂಟೆ ಎಂದರೆ ಸರಿ. ಹಳೇ ಸರ್ವೆ ನಂ. 88 ಹೊಸ ಸರ್ವೆ ನಂ. 88/1 ಮತ್ತು 88/2 ಎಂದು ಪೋಡಿಯಾಗಿದೆ ಎಂದರೆ ಸರಿ. ಪೋಡಿಯಾದ ನಂತರ ಸರ್ವೆ ನಂ.88/1 ರಲ್ಲಿ 7 ಎಕರೆ 28 ಗುಂಟೆ ಹಾಗೂ ಸರ್ವೆ ನಂ. 88/2 ರಲ್ಲಿ 1 ಎಕರೆ ಜಮೀನು ಇದೆ ಎಂದರೆ ಗೊತ್ತಿಲ್ಲ. ಸರ್ವೆ ನಂ. 88/1 ರಲ್ಲಿ 7 ಎಕರೆ 15 ಗುಂಟೆ ಬಿಟ್ಟು ಉಳಿಕೆ ಖರಾಬು ಜಮೀನಿನಲ್ಲಿ ಮತ್ತು ಸರ್ವೆ ನಂ. 88/2 ರ 1 ಎಕರೆ ಜಮೀನಿನಲ್ಲಿ ಸರ್ಕಾರದ ಸಂಸ್ಥೆಗಳ ಕಟ್ಟಡಗಳು ನಿರ್ಮಾಣವಾಗಿದೆ ಹಾಗೂ ಅದರಲ್ಲಿ ಜನರೂ ಸಹ ಮನೆಗಳನ್ನು ಕಟ್ಟಿಕೊಂಡಿದ್ದಾರೆ ಎಂದರೆ ಸಾಕ್ಷಿ ಖರಾಬು ಜಮೀನಿನಲ್ಲಿ ಯಾವುದೇ ಕಟ್ಟಡ ಅಥವಾ ಮನೆ ಇರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಜಮೀನು ಮತ್ತು ಖರಾಬು ಜಮೀನು ಎಲ್ಲಿದೆ ಎಂದು ಸರ್ವೆ ಮಾಡಿಸಿದ್ದೇನೆ. ಸಾಕ್ಷಿಯು ಮುಂದುವರೆದು ದೇವಸ್ಥಾನದ ಹತ್ತಿರ ಮಾತ್ರ ಖರಾಬು ಜಮೀನು ಬರುತ್ತದೆ ಎಂದು ನುಡಿಯುತ್ತಾರೆ.

ಸರ್ವೆ ನಂ. 88 ರ ಜಮೀನು ಮೂಲತಃ ವೆಂಕಟರಮಣಸ್ವಾಮಿ ದೇವಸ್ಥಾನದ ಇನಾಮ್ತಿ ಜಮೀನು ಎಂದರೆ ಸರಿ. ಸರ್ವೆ ನಂ. 88 ರಲ್ಲಿ ದೇವಸ್ಥಾನವು ಇದೆ ಎಂದರೆ ಸರಿ. ಸರ್ವೆ ನಂ. 88/1 ರಲ್ಲಿ ಇರುವ ಪ್ರತಿವಾದಿಗಳ ಮನೆಗಳಿಗೆ ಗ್ರಾಮಪಂಚಾಯಿತಿಯವರು 2000 ಇಸವಿಯಲ್ಲಿ ಖಾತೆಯನ್ನು ಮಾಡಿಕೊಟ್ಟಿದ್ದಾರೆ ಎಂದರೆ ಸಾಕ್ಷಿ ಹಣ ಪಡೆದುಕೊಂಡು ಮಾಡಿಕೊಟ್ಟಿರಬಹುದು ಎಂದು ಮೊದಲು ನುಡಿದು ನಂತರ ಪ್ರತಿವಾದಿಗಳ ಹೆಸರಿಗೆ ಖಾತೆಯಾಗಿಲ್ಲ ಎಂದು ನುಡಿಯುತ್ತಾರೆ. ಪಂಚಾಯಿತಿಯವರು ಪ್ರತಿವಾದಿಗಳಿಗೆ ಖಾತೆ ನಂ. 38,40,42,43,47,50 ಮತ್ತು 51 ನ್ನು ನೀಡಿದ್ದಾರೆ ಎಂದರೆ ಗೊತ್ತಿಲ್ಲ. ಸರ್ವೆ ನಂ. 88/1 ರಲ್ಲಿರುವ ಖರಾಬು ಜಮೀನಿನಲ್ಲಿರುವ ನಿವೇಶನಗಳಿಗೆ ಸರ್ಕಾರದವರು ಹಕ್ಕು ಪತ್ರ ನೀಡಿರುವುದಾಗಿ

ಪ್ರತಿವಾದಿಗಳು ಇದೇ ನ್ಯಾಯಾಲಯದ ಮುಂದೆ ಅಸಲು ದಾವೆ ಸಂಖ್ಯೆ 27/2015 ರ ದಾವೆಯನ್ನು ಹೂಡಿದ್ದಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ತಕರಾರನ್ನು ಸಲ್ಲಿಸಿದ್ದೇನೆ. ಸದರಿ ದಾವೆಯ ವಾದಿಗಳು ನ್ಯಾಯಾಲಯದ ಮುಂದೆ ಹಾಜರು ಇರಲಿಲ್ಲ ಎಂಬ ಕಾರಣಕ್ಕಾಗಿ ಸದರಿ ದಾವೆಯನ್ನು ನ್ಯಾಯಾಲಯವು ವಜಾಗೊಳಿಸಿತ್ತು ಎಂದರೆ ನೆನಪಿಲ್ಲ. ಸದರಿ ವಜಾಗೊಂಡಿರುವ ದಾವೆಗೆ ಪುನರ್ ಜೀವ ನೀಡಬೇಕೆಂದು ಮಿಸ್ 18/2020 ರ ಪ್ರಕರಣವನ್ನು ಸಹ ಹೂಡಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ಮಿಸ್ ಪ್ರಕರಣದಲ್ಲಿ ನಾನು ವಕೀಲರ ಮೂಲಕ ಹಾಜರಾಗಿ ತಕರಾರನ್ನು ಸಲ್ಲಿಸಿದ್ದೇನೆ ಎಂದರೆ ನೆನಪಿಲ್ಲ. ಸದರಿ ಪ್ರಕರಣವು ಇಂದಿಗೂ ಈ ನ್ಯಾಯಾಲಯದ ಮುಂದೆ ನಡೆಯುತ್ತಿದೆ ಎಂದರೆ ಗೊತ್ತಿಲ್ಲ.

ಸರ್ವೆ ನಂ. 88/1 ರಲ್ಲಿರುವ 7 ಎಕರೆ 15 ಗುಂಟೆ, ಉಳಿಕೆ ಖರಾಬು ಜಮೀನು ಹಾಗೂ ಸರ್ವೆ ನಂ. 88/2 ರ 1 ಎಕರೆ ಜಮೀನಿನ ಗಡಿಗಳ ಬಗ್ಗೆ ಇಂದಿಗೂ ವಿವಾದವಿದೆ ಎಂದರೆ ಸರಿಯಲ್ಲ. ಎದುರುದಾರರು ಈ ಪ್ರಕರಣದಲ್ಲಿ ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡದಿದ್ದರೂ ಸಹ ಅವರಿಗೆ ತೊಂದರೆ ನೀಡಬೇಕೆಂಬ ಉದ್ದೇಶದಿಂದ ಸುಳ್ಳು ಅರ್ಜಿಯನ್ನು ಸಲ್ಲಿಸಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ**.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-
ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,
ಗೌರಿಬಿದನೂರು